# ಹವ್ಯಾಸದ ಛಲ; ಸಮಾಜಸೇವೆಗೂ ಬಲ

ವಿಜಯಪುರದಲ್ಲಿ ಒಂದು ಖಾನಾವಳಿ. ಅಲ್ಲಿ ಮಧ್ಯಾಹ್ನ, ರಾತ್ರಿ ಊಟದ ಹೊತ್ತಿಗೆ ತಾಟುಗಳು ಅಣಿಯಾಗುತ್ತಿರುತ್ತವೆ. ಹಾಗೆ ತಾಟುಗಳಿಗೆ ಉತ್ತರ ಕರ್ನಾಟಕದ ಜವಾರಿ ಖಾದ್ಯಗಳನ್ನೆಲ್ಲ ಒಪ್ಪವಾಗಿ ಇರಿಸುವ ಒಬ್ಬ ಯುವಕ ಬಿಡುವಿನ ವೇಳೆಯಲ್ಲಿ ಯೂಟ್ಯೂಬರ್. ಪ್ರಕಾಶ್ ಆರ್.ಕೆ. ಅವರೇ ಅಂತಹ ಅಪರೂಪದವರು.

ವಂಶ ಪಾರಂಪರ್ಯವಾಗಿ ಬಂದ ಖಾನಾವಳಿಯನ್ನು ನಡೆಸುತ್ತಲೇ ಅವರು ಮನರಂಜನೆಯ ಮಾಘಸ್ನಾನವನ್ನೂ ಮಾಡುತ್ತಾರೆ.

ಪ್ರಕಾಶ್ ಅವರಿಗೆ ಓದು ಅಷ್ಟಾಗಿ ಆಗಿಬರಲಿಲ್ಲ. ರಂಗ ತಂಡದವರು ಕಂಡರೆ ಸಾಕು, ಅವರ ಹಿಂದೆ ಹೊರಟುಬಿಡುತ್ತಿದ್ದರು. ತಮಗೂ ಒಂದು ಪಾತ್ರ ಕೊಡಬೇಕು ಎಂದು ಕೇಳಿಕೊಳ್ಳುತ್ತಿದ್ದರು. ಇದೇ ರೀತಿಯಲ್ಲಿ 20–30 ಹವ್ಯಾಸಿ ನಾಟಕಗಳಲ್ಲಿ ಅವರು ಅಭಿನಯಿಸಿದರು. ನಾಟಕಗಳನ್ನು ನೋಡುವವರ ಸಂಖ್ಯೆ ಕಡಿಮೆಯಾದದ್ದೇ, ಡಿಜಿಟಲ್ ವೇದಿಕೆಗಳು ಕನಸಿಗೆ ರೆಕ್ಕೆಪುಕ್ಕ ಹಚ್ಚಿದವು. ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಯೂಟ್ಯೂಬ್ ವೇದಿಕೆಗಳು ಜಗತ್ತಿನ ಮೂಲೆ ಮೂಲೆಯಲ್ಲಿ ಇರುವವರಿಗೆ ಕಂಟೆಂಟ್ ತಲುಪಿಸಬಲ್ಲವು ಎನ್ನುವ ಸತ್ಯ ಪ್ರಕಾಶ್ ಅವರಿಗೂ ಬೇಗ ತಿಳಿಯಿತು. ಯಾರು ಬೇಕಾದರೂ ತಮ್ಮ ಪ್ರತಿಭೆಯನ್ನು ಈ ವೇದಿಕೆಗಳಲ್ಲಿ ತೋರಬಹುದೆನ್ನುವ ಮುಕ್ತ ಸಾಧ್ಯತೆಯನ್ನೇ ಅವರು ತಮ್ಮ ಹವ್ಯಾಸವನ್ನು ಪೋಷಿಸಲು ಬಳಸಿಕೊಳ್ಳಲು ಆರಂಭಿಸಿದರು.

ಪ್ರಕಾಶ್ ಅವರಿಗೆ ಹಾಡು ಬರೆಯುವ ಹುಚ್ಚು. ಅವರದ್ದೇ ಹೆಸರಿನ ಯೂಟ್ಯೂಬ್ ಚಾನಲ್ ಹೊಕ್ಕರೆ ಅಲ್ಲಿ ರ‍್ಯಾಪ್ ಶೈಲಿಯ, ಮಿಸಳಭಾಜಿ ವರಸೆಯ ಕೆಲವು ಹಾಡುಗಳು ಕಾಣುತ್ತವೆ. ಅವುಗಳಿಗೆ ಸಾಲು ಬರೆಯುವುದು ಅವರೇ. ಅಭಿನಯಿಸುವುದೂ ತಾವೇ. ಮಟ್ಟುಗಳನ್ನು ಹಾಕಿಸುವುದು ಬೇರೆ ಪ್ರತಿಭೆಗಳಿಂದ. ಹಾಡುಗಳಲ್ಲಿಯೂ ಈ ಕಾಲದ, ಜನರಿಗೆ ಹತ್ತಿರವಾಗುವ ಸಂಗತಿಗಳನ್ನು ಹೇಳಬೇಕೆನ್ನುವುದು ಅವರ ಬಯಕೆ. 'ಕನ್ಯಾ ಸಿಕ್ಕಿಲ್ಲ' ಎಂಬ ಅವರ ಇತ್ತೀಚಿನ ವಿಡಿಯೊ ಅದಕ್ಕೆ ಉದಾಹರಣೆ. ಗಂಡು ರೈತನಾಗಲಿ, ಬೇರೆ ಯಾವುದೇ ವೃತ್ತಿಯಲ್ಲಿ ಇರಲಿ ಹೆಣ್ಣು ದೊಡ್ಡ ಡಿಮ್ಯಾಂಡ್ ಇಟ್ಟು ಲಗ್ನಕ್ಕೆ ಒಲ್ಲದೇ ಇರುವ ಸಮಸ್ಯೆಯೊಂದನ್ನು ಅದು ನವಿರಾಗಿ ಹೇಳುತ್ತದೆ. 'ಗಪ್ಪಾಗನಾ ನನ್ನ ದೋಸ್ತಾ' ಎಂಬ ಇನ್ನೊಂದು ಜನಪ್ರಿಯ ಗೀತೆಯ ವಿಡಿಯೊವನ್ನು ಅವರು ಮಾಡಿದರು. ಕಷ್ಟ ಎಂದು ಹೇಳಿಕೊಂಡು, ಹಣ ಪಡೆಯುವ ಸ್ನೇಹಿತನು ಪಡೆದ ಹಣವನ್ನು ಮೋಜು–ಮಸ್ತಿಗೆ ಬಳಸುವ ವರಸೆಯನ್ನು ಆ ವಿಡಿಯೊ ತೆರೆದಿಡುತ್ತದೆ. 'ಉಡಾಳ್ ಪಾವ್ಯಾ' ಎಂದೇ ಜನಪ್ರಿಯರಾದ ಪವನ್ ಕೃಷ್ಣ ಕುಲಕರ್ಣಿ ಅವರೊಟ್ಟಿಗೆ ಸೇರಿ ಸಿದ್ಧಪಡಿಸಿರುವ ವಿಡಿಯೊ ಇದು; ಎರಡು ಬೇರೆ ಬೇರೆ ಮನಸ್ಸುಗಳ ಕ್ರಿಯಾಶೀಲತೆಯ ಜಂಟಿ ಪ್ರಯೋಗ.

ಪ್ರಕಾಶ್ ಅವರು ಕೇವಲ ಹಾಡುಗಳ ವಿಡಿಯೊ ಅಷ್ಟೇ ಅಲ್ಲ, ಹಾಸ್ಯವಲ್ಲರಿಯನ್ನೂ ಮೂಡಿಸುತ್ತಾರೆ. 'ಹನುಮವ್ವ' ಎಂಬ ಅವರ ವಿಡಿಯೊ ಸರಣಿಯು ಜನಪ್ರಿಯವಾಗಿತ್ತು.

'ಒಮ್ಮೆ ಯಾವುದೋ ವಿಡಿಯೊ ಮಾಡೋಣ ಎಂದು ವಿಗ್ ತಂದೆ. ಅದು ಬಣ್ಣ ಬಣ್ಣದ್ದಾಗಿತ್ತು. ಅಂದುಕೊಂಡಿದ್ದನ್ನು ಮಾಡಲು ಆಗಲಿಲ್ಲ. ಆ ವಿಗ್ ಹಾಗೆಯೇ ಇತ್ತು. ಒಮ್ಮೆ ಅದನ್ನು ಬಳಸಿಕೊಂಡು, ನಾನೇ ಹನುಮವ್ವನ ಪಾತ್ರದಲ್ಲಿ ಅಭಿನಯಿಸಿದರೆ ಹೇಗೆ ಎಂದು ನಿರ್ಧರಿಸಿದೆ. ಅದಕ್ಕೇ ಆ ಸ್ಕ್ರಿಪ್ಟ್ ಬರೆದೆ. ಈ ಕಾಲದಲ್ಲಿ ಅವ್ವ–ಮಗಳ ನಡುವೆ ನಡೆಯುವ ಆಸಕ್ತಿಕರವಾದ ಸಂಗತಿಗಳನ್ನೇ ಇಟ್ಟುಕೊಂಡು ಹೆಣೆದ ಪ್ರಸಂಗಗಳು ಅವು' ಎಂದು ಪ್ರಕಾಶ್ ಹೇಳುತ್ತಾರೆ.

ಹನುಮವ್ವನ ಪಾತ್ರಧಾರಿಯನ್ನು ಹೆಣ್ಣು ಎಂದು

'ಗುಲಾಬ್ ಜಾಮೂನ್' ಎನ್ನುವ ಒಂದು ಸರಣಿಯನ್ನು ಮಲ್ಲು ಯೂಟ್ಯೂಬ್‌ನಲ್ಲಿ ಮಾಡಿದರು. ಮದುವೆಯಾದ ಗಂಡ ಹೆಂಡತಿ ನಾನೊಂದು ತೀರ, ನೀನೊಂದು ತೀರ ಎನ್ನುವಂತೆ ಇರುತ್ತಾರೆ. ಆಕೆಗೆ ಒಬ್ಬ ಪ್ರಿಯಕರ ಇದ್ದಾನೆ. ಅದು ಗೊತ್ತಿದ್ದೂ ಅವಳನ್ನು ಸಂತೈಸುವ ನಾಯಕನಾಗಿ ಮಲ್ಲು ಅದರಲ್ಲಿ ನಟಿಸಿದ್ದಾರೆ. ಆ ಸರಣಿಯಲ್ಲಿ ಮಲ್ಲು ಅವರಿಗೆ ಅಮೃತಾ ಕಾಳೆ ಜೋಡಿಯಾಗಿದ್ದರು.

'ಗುಲಾಬ್ ಜಾಮೂನ್' ಸರಣಿಯ ವಸ್ತುವನ್ನು ನಾನು ಯೋಚಿಸಲು 'ಮಿಲನ' ಚಿತ್ರವೇ ಸ್ಫೂರ್ತಿ. ಆದರೆ, ಅದನ್ನು ಯಥಾವತ್ತಾಗಿ ಮಾಡದೆ, ಆತ್ಮವನ್ನು ಮಾತ್ರ ಇಟ್ಟುಕೊಂಡು ಪಾತ್ರಗಳನ್ನು ಬೇರೆ ರೀತಿ ಬರೆದೆ. ಅದರ ಮುಖ್ಯ ಪಾತ್ರ ರಾಘುವಿಗೆ ಮ್ಯಾನರಿಸಂ ಒಂದು ರೀತಿ ಭಿನ್ನ. ಶಾಣ್ಯಾ ಇರ್ತಾನೆ. ನಿಧಾನವಾಗಿ ಮಾತನಾಡ್ತಾನೆ. ನಾನು ಅಂಥದ್ದೇ ವ್ಯಕ್ತಿತ್ವದ ಒಬ್ಬರನ್ನು ನೋಡಿದ್ದೆ. ಅದನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡು ಆ ರೀತಿ ಪಾತ್ರವನ್ನು ಸೃಷ್ಟಿಸಿದೆ. ಉಸಿರು ತೆಗೆದುಕೊಳ್ಳದೆ ಒಂದೇ ಸಲಕ್ಕೆ ಉದ್ದುದ್ದ ವಾಕ್ಯಗಳನ್ನು ಮೆಲುದನಿಯಲ್ಲಿ ಹೇಳುವ ಶೈಲಿಯ ಮಾತುಗಾರಿಕೆಯ ಪಾತ್ರ ಅದು. ಮರಾಠಿ ಪಾತ್ರಧಾರಿಗಳಲ್ಲಿ ಅಂತಹುದೊಂದು ಶೈಲಿಯನ್ನು ನಾನು ಗಮನಿಸಿದ್ದೆ. ಅದನ್ನೇ ದುಡಿಸಿಕೊಂಡೆ. ಜನರಿಗೆ ಅದು ಇಷ್ಟವಾಯಿತು...' ಎಂದು ಮಲ್ಲು ಸೃಷ್ಟಿಕ್ರಿಯೆಯ ಹಿಂದಿನ ಪ್ರಕ್ರಿಯೆಯನ್ನೂ ಈ ಮಾತಿನ ಮೂಲಕ ತೆರೆದಿಟ್ಟರು.



### ರಂಜನೆಯ ಹೊಸ ನಿಲುದಾಣಗಳು

ಯೂಟ್ಯೂಬ್‌ನಲ್ಲಿ ಇಷ್ಟೆಲ್ಲ ಸರಕುಗಳು ಬರುತ್ತಿರುವಾಗ ಜನರಿಗೆ ಇದೇ ಮುಖ್ಯ ಮನರಂಜನಾ ವೇದಿಕೆ ಆಗುವುದೇ ಎಂಬ ಪ್ರಶ್ನೆಯನ್ನು ಮಲ್ಲು ಅವರ ಮುಂದಿಟ್ಟಾಗ, ಅವರಿಗೆ ತಕ್ಷಣಕ್ಕೆ ಉತ್ತರ ಕೊಡಲು ಆಗಲಿಲ್ಲ. ಆದರೆ ಸಿನಿಮಾ ಜಾಗವನ್ನು ಇಂತಹ ವೇದಿಕೆಗಳ ರಂಜನೆಯ ಕಾರ್ಯಕ್ರಮಗಳು ಒಂದು ಮಟ್ಟಕ್ಕೆ ಆವರಿಸಿಕೊಂಡಿರುವುದನ್ನು ಅಲ್ಲಗಳೆಯಲಾಗದು ಎನ್ನುತ್ತಾರೆ.

ತಮ್ಮ ಊರಿನ ಜನ ಬಂಡಿ ಮಾಡಿಕೊಂಡು, ದೂರದೂರಿನ ಚಿತ್ರಮಂದಿರಗಳಿಗೆ ಹೋಗಿ ಸಿನಿಮಾ ನೋಡಿಕೊಂಡು ಬರುತ್ತಿದ್ದ ದಿನಗಳನ್ನು ಮಲ್ಲು ಬಾಗಲಕೋಟೆ ನೆನಪಿಸಿಕೊಳ್ಳುತ್ತಾರೆ. ಈಗ ಅಂಗೈ ಅಗಲದ ಮೊಬೈಲ್ ಮೇಲೆ ಮನರಂಜನೆಯ ಬ್ರಹ್ಮಾಂಡ ದೊರೆಯುತ್ತಿದೆ. ಹೀಗಾಗಿ ಕ್ರಮೇಣ ಇದು ಜನರ ನೋಡುವ ಸಂಸ್ಕೃತಿಯಲ್ಲಿ ಗಮನಾರ್ಹ ಬದಲಾವಣೆ ತರುತ್ತಿರುವುದನ್ನು ಮಲ್ಲು ಗುರುತಿಸುತ್ತಾರೆ. ಮೂರು ತಾಸು ಒಂದೆಡೆ ಕುಳಿತು, ಎಲ್ಲವನ್ನೂ ತೊರೆದುಕೊಂಡಂತೆ